# ಮೊದಲ ನೋಟಕ್ಕೆ ಸಿಕ್ಕ ಮಲ್ಪೆ

ಮೀನಿನ ವಾಸನೆ ಆತುಕೊಂಡ ಹಾದಿ ಸವೆಸಿ ಮಲ್ಪೆ ಬಂದರು ತಲುಪಿದವರ ಗುರಿ ಸೇಂಟ್ ಮೇರೀಸ್ ಐಲ್ಯಾಂಡ್ ಕಣ್ತುಂಬಿಕೊಳ್ಳುವುದಾಗಿತ್ತು.

■ ಚಿತ್ರ– ಲೇಖನ: **ಎಚ್.ಕೆ.ಶರತ್**



ಪ್ರವಾಸಿಯ ವೇಷವನ್ನು ಮೈಮನಸ್ಸಿಗೆ ಹೊದ್ದುಕೊಂಡು ಮಲ್ಪೆ ಬಂದರಿನ ಹಾದಿ ಹಿಡಿದವನನ್ನು ಮೊದಲಿಗೆ ಸ್ವಾಗತಿಸಿದ್ದು ಗಾಢವಾದ ಮೀನಿನ ವಾಸನೆ. ಊಟದ ತಟ್ಟೆಯಲ್ಲೇ ಮೀನು ನೋಡುವ ನನ್ನ ಪಾಲಿಗದು ಸುವಾಸನೆಯಾದರೆ, ಜೊತೆಗಿದ್ದ ಕೆಲವರಿಗೆ ಅಸಹನೀಯವಾಗಿತ್ತು! ಮಲ್ಪೆ ಬಂದರು ಇನ್ನು ಒಂದೆರಡು ಕಿ.ಮೀ. ದೂರದಲ್ಲಿರುವಾಗಲೇ ಈ ಪರಿಯ ಮೀನಿನ ಘಮಲು ನನ್ನ ಪಾಲಿಗಂತೂ ವಿಶೇಷವಾಗಿತ್ತು.

ಮೀನಿನ ವಾಸನೆ ಆತುಕೊಂಡ ಹಾದಿ ಸವೆಸಿ ಮಲ್ಪೆ ಬಂದರು ತಲುಪಿದವರ ಗುರಿ ಸೇಂಟ್ ಮೇರೀಸ್ ಐಲ್ಯಾಂಡ್ ಕಣ್ತುಂಬಿಕೊಳ್ಳುವುದಾಗಿತ್ತು. ಹಾಗಾಗಿ, ದಣಿವಾರಿಸಿಕೊಳ್ಳುತ್ತಿದ್ದ ನೂರಾರು ಮೀನುಗಾರಿಕಾ ಬೋಟುಗಳಿಗೆ ವಿದಾಯ ಹೇಳಿ, ಸೇಂಟ್ ಮೇರಿಸ್ ಐಲ್ಯಾಂಡಿನ ದಾರಿ ಹಿಡಿದೆವು. ಮಧ್ಯಾಹ್ನದ ಪ್ರಖರ ಬಿಸಿಲು ಆಗಷ್ಟೇ ಕರಗಲಾರಂಭಿಸಿತ್ತು. ಏರಿಳಿತದ ನೀರ ಹಾದಿಯ ಮೇಲೆ ಚಲಿಸಲಾರಂಭಿಸಿದ ಬೋಟು, ಸಮುದ್ರದ ಮೇಲ್ಮೈ ಸೀಳುತ್ತ ಸಾಗಿತು. ಸುತ್ತಲೂ ಜಲರಾಶಿ ಹೊದ್ದು, ಆಗಾಗ ಮುಳುಗೇಳುವ ಸೇಂಟ್ ಮೇರೀಸ್ ದ್ವೀಪ ಅದ್ವೇಗೆ ತನ್ನನ್ನು